ಮೈಸೂರು ವಿಶ್ವವಿದ್ಯಾನಿಲಯ

ಸಂ. ಪ.ವಿ 8.1/ಪಿ.ಜಿ. ಸೆಮಿಸ್ಟರ್/2009-10

ದಿನಾಂಕ 02-07-2025

ಎಲ್ಲಾ ಅಧ್ಯಯನ ವಿಭಾಗಗಳ/ಕೇಂದ್ರಗಳ ಅಧ್ಯಕ್ಷರು/ನಿರ್ದೇಶಕರು/ಮುಖ್ಯಸ್ಥರು
ಮಾನಸಗಂಗೋತ್ರಿ, ಮೈಸೂರು.

ಮಾನ್ಯರೇ,

ವಿಷಯ: ಜುಲೈ 2025 ರಲ್ಲಿ ನಡೆಯಲಿರುವ ಸ್ನಾತಕೋತ್ತರ ಪರೀಕ್ಷೆಗಳ ಸಂಬಂಧ

----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 03-07-2025 ರಿಂದ ಪ್ರಾರಂಭವಾಗುತ್ತಿರುವ ಸ್ನಾತಕೋತ್ತರ ಪರೀಕ್ಷಗಳನ್ನು ಮೌಲ್ಯಭವನದಲ್ಲಿ ನಡೆಸಲಾಗುತ್ತಿದ್ದು, ತಾವು ಪರೀಕ್ಷಾ ಮುಖ್ಯ ಅಧೀಕ್ಷಕರಾಗಿರುವುದರಿಂದ, ತಮ್ಮ ತಮ್ಮ ವಿಭಾಗಕ್ಕೆ ಸಂಬಂಧಿಸಿದ ಪರೀಕ್ಷೆಗಳು ನಡೆಯುವ ಹಿಂದಿನ ದಿನದಂದು, ತಮ್ಮ ವಿಭಾಗದ ಸಿಬ್ಬಂದಿಗಳು ಮತ್ತು ಮೇಲ್ವಿಚಾರಕರುಗಳೊಂದಿಗೆ ಮೌಲ್ಯಭವನಕ್ಕೆ ಬಂದು, ಹಿಂದೆ ತಮ್ಮ ತಮ್ಮ ವಿಭಾಗಗಳಲ್ಲಿ ಮಾಡಿಕೊಳ್ಳುತ್ತಿದ್ದಂತೆಯೇ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದು ಮತ್ತು ಉತ್ತರ ಪತ್ರಿಕೆಗಳನ್ನು ಅಂದೇ ಸೀಲ್ ಮಾಡಿಸಿ, ಪರೀಕ್ಷಾ ವಿಭಾಗದಿಂದ ನಿಯೋಜಿಸಿರುವ ಸಿಬ್ಬಂದಿಗೆ ಸಲ್ಲಿಸುವಂತೆ ಈ ಮೂಲಕ ಕೋರಲಾಗಿದೆ.

ಈಗಾಗಲೇ ತಮಗೆಲ್ಲಾ ತಿಳಿದಿರುವಂತೆ, ಸ್ನಾತಕೋತ್ತರ ಪರೀಕ್ಷೆಗಳು ಮೊದಲ ಬಾರಿಗೆ ಮೌಲ್ಯಭವನದಲ್ಲಿ ನಡೆಯುತ್ತಿದ್ದು, ಪರೀಕ್ಷೆಗಳು ಸುಗಮ/ಸುಸೂತ್ರವಾಗಿ ನಡೆಯುವಲ್ಲಿ ತಮ್ಮೆಲ್ಲರ ಸಹಾಯ ಮತ್ತು ಸಹಕಾರವನ್ನು ಕೋರಲಾಗಿದೆ.

ತಮ್ಮ ವಿಶ್ವಾಸಿ

2/7/25

ಕುಲಸಚಿವ (ಪರೀಕ್ಷಾಂಗ)

ಪ್ರತಿ:

1. ಪ್ರೊ.ಎಂ.ವೈ. ಶ್ರೀನಿವಾಸ, ಪ್ರಾಧ್ಯಾಪಕರು ಹಾಗೂ ಸ್ನಾತಕೋತ್ತರ ಪರೀಕ್ಷೆಗಳ ಸಂಯೋಜಕರು, ಮೈಕ್ರೊಬಯಾಲಜಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಮಾನ್ಯ ಕುಲಪತಿ/ಕುಲಸಚಿವರು/ಕುಲಸಚಿವರು(ಪರೀಕ್ಷಾಂಗ) ರವರ ಆಪ್ತ ಸಹಾಯಕರು, ಮೈ.ವಿ.ವಿ.